**ಕರ್ನಾಟಕ ಸರ್ಕಾರ**

**(ಪಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 490/2018**

**ಫ್ರಾಸಾ- 3 ಚಾಸಾ- 3**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಶೋಭಾ ಎ ಎಸ್ |
| ಗಂಡನ ಹೆಸರುಃ | : | ಪುರುಶೋತ್ತಮ |
| ವಯಸ್ಸುಃ | : | 45 ವರ್ಷ |
| ಉದ್ಯೋಗಃ | : | ಎಸ್ ಡಿ ಎ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 10-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2008ರಿಂದ 2020ರವರೆಗೆ ನಾನು ಹಾಸನ ಡಿಹೆಚ್ ಒ ಕಛೇರಿಯಲ್ಲಿ ದ್ವಿದ.ಗುಮಾಸ್ತರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕಃ13-3-2017ರಂದು ಎಸಿಬಿ ಪೊಲೀಸರು ಡಿಹೆಚ್ಒ ಕಛೇರಿಗೆ ಇಬ್ಬರು ಸಾಕ್ಷಿದಾರರು ಬೇಕೆಂದು ಕೇಳಿಕೊಂಡ ಮೇರೆಗೆ ನನ್ನನ್ನು ಮತ್ತು ಶ್ರೀಧರ್ ಎಂಬುವವರನ್ನು ಡಿಹೆಚಒ ರವರು ಎಸಿಬಿ ಕಛೇರಿಗೆ ಕಳುಹಿಸಿಕೊಟ್ಟಿದ್ದರು. ಬೆಳಿಗ್ಗೆ 10-50 ಗಂಟೆಗೆ ನಾವು ಸದರಿ ಕಛೇರಿಗೆ ಹೋಗಿದ್ದೆವು. ಅಲ್ಲಿ ಪೊಲೀಸ್ ಉಪಾಧೀಕ್ಷಕರಾದ ರಾಜು ಮತ್ತು ಇತರ ಸಿಬ್ಬಂದಿಗಳಿದ್ದರು. ಅಲ್ಲಿ ದೂರುದಾರರಾದ ನೀತುರವರು ಇದ್ದರು. ಪೊಲೀಸ್ ಉಪಾಧೀಕ್ಷಕರಾದ ರಾಜುರವರು ನೀತುರವರ ಪರಿಚಯ ಮಾಡಿಕೊಟ್ಟರು. ನೀತುರವರು

ನೀಡಿದ್ದ ದೂರನ್ನು ಓದಲು ನಮಗೆಕೊಟ್ಟರು, ನಾವು ಓದಿಕೊಂಡೆವು. ಅದರಲ್ಲಿ ಖಾತಾ ಬದಲಾವಣೆಗೆ 3ಸಾವಿರ, ಚೆಕ್ಕುಬಂದಿಗೆ 2ಸಾವಿರ ಒಟ್ಟು 5ಸಾವಿರ ಲಂಚ ಕೊಡಬೇಕೆಂದು ಮನು ಎಂಬುವವರು ಕೇಳಿದ್ದಾರೆಂದು ಬರೆದಿತ್ತು. ನೀತುರವರು ಆ 5ಸಾವಿರ ರೂಪಾಯಿ ಹಣವನ್ನು ತಾನು ತಂದಿರುವುದಾಗಿ ಹೇಳಿ ಹಾಜರುಪಡಿಸಿದರು. ಪೊಲೀಸ್ ಉಪಾಧೀಕ್ಷಕರು ಆ ಹಣವನ್ನು ಎಣಿಸಲು ನನಗೆ ಕೊಟ್ಟರು, ನಾನು ಅದನ್ನು ಎಣಿಸಿ ವಾಪಸ್ ಅವರಿಗೆ ಕೊಟ್ಟೆನು. ಅದರಲ್ಲಿ 500ರ ಹತ್ತು ನೋಟುಗಳಿದ್ದವು. ಅದರ ನಂಬರನ್ನು ನಾನು ಹೇಳುತ್ತಾ ಹೋದಂತೆ ಸಾಕ್ಷಿ ಶ್ರೀಧರ್ ರವರು ಹಾಳೆಯಲ್ಲಿ ಬರೆದುಕೊಂಡರು. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಅದು ನಿಪಿ-5 ಆಗಿರುತ್ತದೆ. ಸಾಕ್ಷಿ ಗುರುತಿಸಿದ ರುಜುವನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

3.ಆ ನೋಟುಗಳಿಗೆ ಪೊಲೀಸರು ಫಿನಾಫ್ತಲಿನ್ ಪುಡಿ ಹಚ್ಚಿಸಿದರು. ಆ ನೋಟುಗಳನ್ನು ನೀತುರವರ ಕೈಗೆ ಕೊಟ್ಟರು ಅವರು ಅದನ್ನು ಪರ್ಸ್ನಲ್ಲಿ ಇಟ್ಟುಕೊಂಡರು. ಆ ಪುಡಿ ಹಚ್ಚಿದ ನಂತರ ಶ್ರೀಧರ್ ರವರು ಆ ಹಣವನ್ನು ಎಣಿಸಿದರು. ಅವರ ಕೈಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಿದರು, ಆಗ ಅದು ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಪ್ರತ್ಯೇಕ ಬಾಟಲಿನಲ್ಲಿ ಸಂಗ್ರಹಿಸಿದರು. ನೀತು ಮತ್ತು ಮನು ರವರ ನಡುವೆ ಆದ ಸಂಭಾಷಣೆಯನ್ನು ಪೊಲೀಸರು ನಮಗೆ ಕೇಳಿಸಿದರು. ಅದನ್ನು ನಂತರ ಸಿಡಿ ಮಾಡಿದರು. ಅಲ್ಲಿ ಫೋಟೋ ತೆಗೆದರು. ಎಲ್ಲ ಕೆಲಸ ಮುಗಿಸಿದರು. ಅಲ್ಲಿ ನಮ್ಮ ಸಹಿ ಪಡೆದುಕೊಂಡರು. ಈಗ ತೋರಿಸಿದ ನಿಪಿ-2ರಲ್ಲಿ ನನ್ನ ರುಜು ಇರುತ್ತದೆ. ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ನಿಪಿ-10 ರಿಂದ 27ರಲ್ಲಿ ನಾನು ಇದ್ದೇನೆ. ಅದನ್ನು ಎಸಿಬಿ ಕಛೇರಿಯಲ್ಲಿ ತೆಗೆದಿರುತ್ತಾರೆ.

4.ನಂತರ ಎಸಿಬಿ ಪೊಲೀಸರು ಎಲ್ಲ ಸಲಕರಣೆಗಳೊಂದಿಗೆ ನಮ್ಮನ್ನು ಕರೆದುಕೊಂಡು ಸಕಲೇಶಪುರ ತಾಲ್ಲೂಕು ಹೊಸೂರು ಗ್ರಾ.ಪಂ.ಬಳಿ ಹೋದರು. ಅಲ್ಲಿ ಗ್ರಾ.ಪಂ.ಗಿಂತ ಸ್ವಲ್ಪ ದೂರದಲ್ಲಿ ವಾಹನ ನಿಲ್ಲಿಸಿದರು. 3ವರೆ ಗಂಟೆಗೆ ನನ್ನನ್ನು ಮತ್ತು ಚಾಸಾ-1ರವರನ್ನು 1ನೇ ಆರೋಪಿತರ ಕಛೇರಿಗೆ ಕಳುಹಿಸಿದರು. ಅದರಂತೆ ನಾವು ಅವರ ಕಛೇರಿಗೆ ಹೋದೆವು. ಅಲ್ಲಿ 1ನೇ ಆರೋಪಿತರಲ್ಲಿ ಚಾಸಾ-1ರವರು ತನ್ನ ಕೆಲಸದ ಕಡತದ ಬಗ್ಗೆ ಕೇಳಿದರು. ಆರೋಪಿತರು ಮಾಡಿಕೊಡುತ್ತೇವೆ ಸ್ವಲ್ಪ ಇರಿ ಎಂದು ಹೇಳಿದರು. ಚಾಸಾ-1ರವರು ದುಡ್ಡು ಕೊಡಲು ಹೋದಾಗ 1ನೇ ಆರೋಪಿಯು ಕಂಪ್ಯೂಟರ್ ಆಪರೇಟರ್ ಗೆ ಕೊಡುವಂತೆ ಹೇಳಿದರು. ಅದರಂತೆ ನಾನು ಮತ್ತು ನೀತು ಕಂಪ್ಯೂಟರ್ ಆಪರೇಟರ್ ಬಳಿ ಹೋದೆವು. ನೀತುರವರು ಅವರಿಗೆ ಹಣವನ್ನು ನೀಡಿದರು. ಅವರು ಅದನ್ನು ಸ್ವೀಕರಿಸಿ ಡ್ರಾವರ್ ನಲ್ಲಿ ಇಟ್ಟುಕೊಂಡರು. ಕಂಪ್ಯೂಟರ್ ಆಪರೇಟರ್ ಸೌಮ್ಯಾರವರು ಸದರಿ ಹಣವನ್ನು ಮನುರವರಿಗೆ ಕೊಟ್ಟ ನಂತರ ನೀತುರವರು ಎಸಿಬಿ ಪೊಲೀಸರಿಗೆ ಸಂಜ್ಞೆ ನೀಡಿದರು. ನಂತರ ಎಸಿಬಿ ಪೊಲೀಸರು ಸಿಬ್ಬಂದಿಗಳು ಹಾಗೂ ಇನ್ನೋರ್ವ ಪಂಚರು ಅಲ್ಲಿಗೆ ಬಂದರು. ಮನು ಮತ್ತು ಸೌಮ್ಯಾರವರಿಗೆ ನಮ್ಮೆಲ್ಲರ ಪರಿಚಯ ಮಾಡಿಕೊಂಡು ಅವರಿಗೆ ಬಂದಿರುವ ಮಾಹಿತಿ ಮತ್ತು ದೂರಿನ ಬಗ್ಗೆ ತಿಳಿಸಿದರು. ತನಿಖಾಧಿಕಾರಿಯು ಮನುರವರ ಬಳಿ ನೀವು ಹಣ ಪಡೆದುಕೊಂಡಿದ್ದೀರ ಎಂದು ವಿಚಾರಿಸಿದರು. ಆಗ ಅವರು ನನಗೆ ಗೊತ್ತಿಲ್ಲ ಸೌಮ್ಯಾರವರು ಕೊಟ್ಟದ್ದನ್ನು ತೆಗೆದುಕೊಂಡು ಅದು ನನ್ನ ಹಣ ಎಂದು ಹೇಳಿ ತನ್ನ ಬ್ಯಾಗ್ ನಲ್ಲಿ ಇಟ್ಟಿರುವುದಾಗಿ ಹೇಳಿದರು. ಅದನ್ನು ತೆಗೆದುಕೊಡುವಂತೆ ತನಿಖಾಧಿಕಾರಿ ಕೇಳಿದಾಗ ಕಪ್ಪು ಬಣ್ಣದ ಬ್ಯಾಗಿನ 2ನೇ ಜಿಪ್ ನಿಂದ ತೆಗೆದು ಮನರವರು ತನಿಖಾಧಿಕಾರಿಗೆ ಕೊಟ್ಟರು. ಅದರಲ್ಲಿ 500ರ ಹತ್ತು ನೋಟುಗಳು ಇದ್ದವು. ಆ ನೋಟು ಎಸಿಬಿಕಛೇರಿಯಲ್ಲಿ ನಾವು ಎಣಿಸಿ ನೋಡಿ ನಿಪಿ-5ರಲ್ಲಿ ಬರೆದುಕೊಂಡಿದ್ದ ನೋಟುಗಳಾಗಿದ್ದವು. ಸೋಡಿಯಂಕಾರ್ಬೊನೇಟ್ ದ್ರಾವಣದಲ್ಲಿ ಮನುರವರ ಎರಡೂ ಕೈಬೆರಳುಗಳನ್ನು ಪ್ರತ್ಯೇಕವಾಗಿ ಅದ್ದಿಸಿದರು. ಆ ದ್ರಾವಣ ನಸುಗುಲಾಬಿ ಬಣ್ಣಕ್ಕೆ ತಿರುಗಿತು. ಅವುಗಳನ್ನು ಪ್ರತ್ಯೇಕ ಬಾಟಲಿನಲ್ಲಿ ಸಂಗ್ರಹಿಸಿದರು. ನಂತರ ಸೌಮ್ಯಾರವರ ಎರಡೂ

ಕೈಬೆರಳುಗಳನ್ನು ಪ್ರತ್ಯೇಕವಾಗಿ ಅದ್ದಿಸಿದರು. ಆ ದ್ರಾವಣ ನಸುಗುಲಾಬಿ ಬಣ್ಣಕ್ಕೆ ತಿರುಗಿತು. ಅವುಗಳನ್ನು ಪ್ರತ್ಯೇಕ ಬಾಟಲಿನಲ್ಲಿ ಸಂಗ್ರಹಿಸಿದರು. ನಂತರ ಅಲ್ಲಿ ಫೋಟೋಗಳನ್ನು ತೆಗೆದರು. ಆ ಫೋಟೋಗಳನ್ನು ಈಗ ನೋಡುತ್ತಿದ್ದು ನಿಪಿ-29 ರಿಂದ 34 ಆಗಿರುತ್ತದೆ. ನಂತರ ಅವರಿಬ್ಬರಿಗೂ ಸಮಜಾಯಿಷಿ ನೀಡುವಂತೆ ಕೇಳಿದರು. ಸಮಜಾಯಿಷಿ ನೀಡಿದರು. ಮನುರವರು ಅದು ತನ್ನದೆಂದು ತಿಳಿದು ಬ್ಯಾಗಿನಲ್ಲಿಟ್ಟಿರುವುದಾಗಿ ಬರೆದುಕೊಟ್ಟರು. ಸೌಮ್ಯಾರವರು ಮನುರವರಿಗೆ ಕೊಡಲು ನೀತುರವರು ಕೊಟ್ಟ ಕಾರಣ ಅದನ್ನು ಸ್ವೀಕರಿಸಿ ಮನುರವರಿಗೆ ಕೊಟ್ಟಿರುವುದಾಗಿ ಬರೆದುಕೊಟ್ಟರು. ಅಲ್ಲಿ ಮಹಜರು ಮಾಡಿ ನಮ್ಮ ಸಹಿ ಪಡೆದುಕೊಂಡರು. ನಿಪಿ-3 ಆ ಮಹಜರ ಆಗಿರುತ್ತದೆ. ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

5.ನಂತರ ಗ್ರಾ.ಪಂ. ಅಧ್ಯಕ್ಷರಾದ ಜರೀನಾ ಮಂಜುನಾಥ್ ರವರನ್ನು ಕರೆಸಿಕೊಂಡರು. ಸಿಡಿ ತಯಾರಿಸಿಟ್ಟಿದ್ದ ಸಂಭಾಷಣೆಯನ್ನು ಅವರಿಗೂ ಕೇಳಿಸಿದರು. ಅವರು ಅದರಲ್ಲಿದ್ದ ಎರಡೂ ಧ್ವನಿಗಳನ್ನು ಆರೋಪಿತರ ಧ್ವನಿ ಎಂದು ಗುರುತಿಸಿದರು. ನಂತರ ನಮ್ಮನ್ನು ಮತ್ತು ಆರೋಪಿತರನ್ನು ಹಾಗೂ ವಶಪಡಿಸಿಕೊಂಡ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಕಛೇರಿಗೆ ಬಂದರು. ಅಲ್ಲಿ ನೀತುರವರ ಕೆಲಸಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೂಡ ಪಡೆದುಕೊಂಡರು. ಆರೋಪಿತರ ಹಾಜರಾತಿ ಪುಸ್ತಕದ ಪ್ರತಿಯನ್ನು ಸಹ ಪಡೆದುಕೊಂಡರು. ಆ ದಿವಸ ರಾತ್ರಿಯಾಗಿದ್ದರಿಂದ ವಾಸಪ್ ನಮ್ಮನ್ನು ಮನೆಗೆ ಕಳುಹಿಸಿಕೊಟ್ಟರು. ಮಾರನೇ ದಿನ ಕಛೇರಿಗೆ ಬರುವಂತೆ ತಿಳಿಸಿದರು.

6.ಅದರಂತೆ ನಾವು ಕಛೇರಿಗೆ 10ಗಂಟೆಗೆ ಹೊದೆವು.ಹಿಂದಿನ ದಿನದ ಪ್ರಕ್ರಿಯೆಯಲ್ಲಿ ತೆಗೆಸಿದ ಫೋಟೋಗಳನ್ನು ನಮಗೆ ನೋಡಲು ಕೊಟ್ಟರು. ಅವುಗಳನ್ನು ವಶಪಡಿಸಿಕೊಂಡು

ನಿಪಿ-35ರಂತೆ ಮಹಜರು ಮಾಡಿದರು. ಅದರಲ್ಲಿ ನನ್ನ ರುಜು ಇದ್ದು ನಿಪಿ-35(ಬಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ನೀತುರವರ ಬಳಿ ಇದ್ದ ಮೆಮೊರಿ ಕಾರ್ಡನ್ನು ವಶಪಡಿಸಿಕೊಂಡು ನಿಪಿ-36ರಂತೆ ಮಹಜರು ಮಾಡಿ ನಮ್ಮ ಸಹಿ ಪಡೆದುಕೊಂಡರು. ಸಾಕ್ಷಿ ಗುರುತಿಸಿದ ರುಜುವನ್ನು ನಿಪಿ-36(ಬಿ) ಎಂದು ಗುರುತಿಸಲಾಯಿತು.

7.ಈಗ ತೋರಿಸಿದ ನಿಪಿ-9ರಲ್ಲಿ ನನ್ನ ರುಜು ಇದೆ. ಅದನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಇದನ್ನು ಟ್ರ್ಯಾಪ್ ಸಮಯದಲ್ಲಿ ತನಿಖಾಧಿಕಾರಿ ತಯಾರಿಸಿರುತ್ತಾರೆ. ಅದಕ್ಕೆ ನನ್ನ ಸಹಿ ಪಡೆದುಕೊಂಡರು.

8.10-5-17ರಂದು ಮತ್ತೊಮ್ಮೆ ಎಸಿಬಿ ಕಛೇರಿಗೆ ಕರೆಸಿದ್ದರು. ಅಲ್ಲಿ ಆರೋಪಿತರ ಧ್ವನಿ ಸಂಭಾಷಣೆಯನ್ನು ಮತ್ತೊಮ್ಮೆ ಆರೋಪಿತರಿಗೆ ಕೇಳಿಸಿದರು. ಅದನ್ನು ನಮಗೂ ಕೇಳಿಸಿದರು. ಆ ಸಮಯದಲ್ಲೂ ಸಹ ಪಂಚನಾಮೆ ಮಾಡಿ ಸಹಿ ಪಡೆದುಕೊಂಡರು. ಸದರಿ ಪಂಚನಾಮೆಯನ್ನು ನಿಪಿ-39 ಎಂದು ಸಾಕ್ಷಿಯ ರುಜುವನ್ನು ನಿಪಿ-39(ಎ) ಎಂದು ಗುರುತಿಸಲಾಯಿತು.

9.ಸದರಿ ಮನು ಮತ್ತು ಸೌಮ್ಯಾರವರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇದ್ದಾರೆ.

**ಪಾಟೀಸವಾಲುಃ 1ನೇ ಆರೋಪಿ ಪರ** ಶ್ರೀ ಕೆ ಎ ಎಸ್ **ವಕೀಲರಿಂದಃ**

ನಾನು ಲೋಕಾಯುಕ್ತ ಪ್ರಕರಣಗಳಲ್ಲಿ ಈ ಒಂದು ಪ್ರಕರಣದಲ್ಲಿ ಮಾತ್ರ ಸಾಕ್ಷಿಯಾಗಿದ್ದೇನೆ. 13-3-17ಕ್ಕಿಂತ ಹಿಂದೆನಾನು ಎಸಿಬಿ ಕಛೇರಿಗೆ ಹೋಗಿಲ್ಲ. ಡಿಹೆಚಓ ಮತ್ತು ಟಿಹೆಚಓ ಕಛೇರಿ ಒಂದು ಕಟ್ಟಡದಲ್ಲಿರುತ್ತದೆ. ನಮ್ಮ ಕಛೇರಿಯ ಸಮಯ 10 ರಿಂದ 5-30

ರವರೆಗೆ ಇರುತ್ತದೆ. 13-3-17ರಂದು ಬೆಳಿಗ್ಗೆ 10-10ಕ್ಕೆ ನಮ್ಮ ಕಛೇರಿಗೆ ಹೋಗಿರುತ್ತೇನೆ. ಹಾಜರಾತಿ ಪುಸ್ತಕದಲ್ಲಿ ನಾನು ಸಹಿ ಮಾಡಿದ್ದೇನಾ ಎಂದರೆ ನೆನಪಿಲ್ಲ. ಆಗ ಡಾಃವೆಂಕಟೇಶ್ ಎಂಬುವವರು ಡಿಹೆಚಒ ಆಗಿದ್ದರು. ಲೋಕಾಯುಕ್ತ ಕಛೇರಿಗೆ ಹೋಗುವಂತೆ ಡಿಹೆಚ್ ಒ ರವರು ನಮಗೆ ಲಿಖಿತ ಆದೇಶ ನೀಡಿಲ್ಲ, ಮೌಖಿಕವಾಗಿ ಹೇಳಿರುತ್ತಾರೆ. ತುರ್ತಾಗಿ ಹೋಗುವಂತೆ ಹೇಳಿದರು. ಆ ದಿವಸದ ಪ್ರಭಾರವನ್ನು ಹತ್ತು ಮುಕ್ಕಾಲು ಗಂಟೆಗೆ ಕೊಟ್ಟು ಎಸಿಬಿ ಕಛೇರಿಗೆ ಹೋದೆನು. ನನ್ನ ದ್ವಿಚಕ್ರವಾಹನದಲ್ಲಿ ಹೋದೆನು. ಎಸಿಬಿ ಕಛೇರಿಗೆ ಹೋದಾಗ ಸಮಯ 10-55 ಆಗಿತ್ತು. ನನ್ನ ಜೊತೆ ಶ್ರೀಧರ್ ರವರು ಬಂದಿದ್ದರು. ಅವರು ಅವರ ದ್ವಿಚಕ್ರವಾಹನದಲ್ಲಿ ಬಂದರು. ಎಸಿಬಿ ಕಛೇರಿಗೆ ಹೋದಾಗ ಡಿವೈ ಎಸ್ ಪಿ ರಾಜುರವರು ಇದ್ದರು.

2.ಡಿಹೆಚ್ ಒ ಕಛೇರಿಯಿಂದ ಎಸಿಬಿ ಕಛೇರಿಗೆ ಐದು ನಿಮಿಷದಲ್ಲಿ ಹೋಗಬಹುದು. ನಾನು ಅಲ್ಲಿಗೆ ಹೋದಾಗ ನೀತುರವರು ಇದ್ದರು. ಡಿವೈ ಎಸ್ ಪಿ ರವರು ಇದ್ದರು. ನೀತುರವರನ್ನು ನಾನು ನೀವೇನು ದೂರು ಕೊಟ್ಟಿದ್ದೀರಾ ಅದರ ಪ್ರತಿ ಕೊಡಿ ಎಂದು ಕೇಳಿದೆನು, ಅವರು ಕೊಟ್ಟರು. ಮೂಲ ಪ್ರತಿಯನ್ನೇ ಕೊಟ್ಟರು.

3.ನನಗೆ ನ್ಯಾಯಾಲಯದಿಂದ ಕಳುಹಿಸಿದ ಸಮನ್ಸ್ ನೀಡುವಾಗ ಅದರ ಜೊತೆನನ್ನ ಹೇಳಿಕೆ ಪ್ರತಿ ಸಹ ಕೊಟ್ಟಿದ್ದರು ಎಂದರೆ ಸರಿ. ರೆವಿನ್ಯೂ ಸ್ವತ್ತುಗಳ ಇಖಾತಾ ಬಗ್ಗೆ ನನಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಆ ಬಗ್ಗೆ ಮಾಹಿತಿ ಇಲ್ಲ ಆದರೆ ದಾಖಲೆಗಳನ್ನು ನಿಗಧಿತ ಅವಧಿಯಲ್ಲಿ ಕೊಡಬೇಕು ಎಂದು ಇರುತ್ತದೆ, ಆ ಬಗ್ಗೆ ಗೊತ್ತು ಎನ್ನುತ್ತಾರೆ. ಚೆಕ್ಕು ಬಂದಿ ಬದಲಾವಣೆ ಪಿಡಿಒ ರವರ ಕಾರ್ಯವ್ಯಾಪ್ತಿಗೆ ಬರುತ್ತದೆ. ದೂರುದಾರರು ದೂರಿನ ಜೊತೆಗೆ ಬೇರೆ ದಾಖಲೆ ಕೊಟ್ಟಿದ್ದಾರಾ ಎಂದರೆ ಸಾಕ್ಷಿಯು ಅವರು ಮೊಬೈಲ್ ಫೋನ್ ನ ಸಂಭಾಷಣೆ

ಕೊಟ್ಟಿದ್ದರು ಎನ್ನುತ್ತಾರೆ. ನಾವು ಎಸಿಬಿ ಕಛೇರಿಗೆ ಹೋಗುವುದಕ್ಕಿಂತ ಮೊದಲೇ ಅವರು ದೂರು ಕೊಟ್ಟಿದ್ದರು. ಲೋಕಾಯುಕ್ತ ಕಛೇರಿಯಲ್ಲಿ 12-45ಗಂಟೆಯವರೆಗೆ ಇದ್ದೆವು. ಧ್ರಾವಣವನ್ನು ಫಿನಾಫ್ತಲಿನ್ ಮತ್ತು ಸೋಡಿಯಂ ಕಾರ್ಬೋನೇಟ್ ನಿಂದ ತಯಾರಿಸಿದರು.

4.13-3-17ರಂದು ಲೋಕಾಯುಕ್ತ ಕಛೇರಿಗೆ ಹೋಗಿದ್ದೆನು, ಅಲ್ಲಿ ನಿಪಿ-2 ರಂತೆ ಮಹಜರ್ ಮಾಡಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ದೂರುದಾರರು 500ರೂ ಮುಖಬೆಲೆಯ ಹತ್ತು ನೋಟುಗಳನ್ನು ಕೊಟ್ಟರು ಅದಕ್ಕೆ ಫಿನಾಫ್ತಲಿನ್ ಪುಡಿಯನ್ನು ತನಿಖಾಧಿಕಾರಿ ಸವರಿಸಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ಪಂಚನಾಮೆ ಮಾಡಿದರು, ಫೋಟೋ ತೆಗೆಸಿದರು ಎನ್ನುವುದು ಸಹ ಸುಳ್ಳು ಎಂದರೆ ಸರಿಯಲ್ಲ.

5.ಎಸಿಬಿ ಕಛೇರಿಯಿಂದ ಆರೋಪಿತರ ಕಛೇರಿಗೆ ಎಷ್ಟು ದೂರ ಎಂದು ನನಗೆ ಹೇಳಲಾಗುವುದಿಲ್ಲ. ಎಸಿಬಿ ಕಛೇರಿಯಿಂದ ನಾನು ಮತ್ತು ದೂರುದಾರರು ಒಂದು ವಾಹನದಲ್ಲಿ ಡಿವೈಎಸ್ ಪಿ ಮತ್ತು ಇತರರು ಇನ್ನೊಂದು ವಾಹನದಲ್ಲಿ ಹೋದೆವು. ನಾವಿದ್ದ ವಾಹನದಲ್ಲಿ  ಸಿಬ್ಬಂದಿಗಳು ಕೂಡ ಇದ್ದರು. ಒಂದು ಜೀಪು ಮತ್ತು ಒಂದು ಕಾರಿನಲ್ಲಿ ಹೋದೆವು, ಯಾವ ಯಾವ ವಾಹನದಲ್ಲಿ ಯಾರು ಯಾರು ಇದ್ದೆವೆಂದು ಈಗ ನಿಖರವಾಗಿ ಹೇಳಲಾಗುವುದಿಲ್ಲ. ಎರಡೂ ವಾಹನಗಳು ಒಟ್ಟಿಗೆ ಹೋದವು. ಅಲ್ಲಿ ಸ್ವಲ್ಪ ದೂರದೂರದಲ್ಲಿ ನಿಲ್ಲಿಸಿದರು. ಆ ಎರಡೂ ವಾಹನಗಳನ್ನು ಅರ್ಧದಿಂದ ಒಂದು ಕಿಮೀ ಅಂತರದಲ್ಲಿ ನಿಲ್ಲಿಸಿದರು. ಆರೋಪಿತರ ಕಛೇರಿ ಪಕ್ಕದಲ್ಲಿ ಯಾವುದೇ ವಾಹನ ನಿಲ್ಲಿಸಲಿಲ್ಲ. ಆರೋಪಿತರ ಕಛೇರಿಯಿಂದ ಸುಮಾರು ಅರ್ಧಕಿಮೀ ದೂರದಲ್ಲಿ ನಿಲ್ಲಿಸಿದ್ದರು. ವಾಹನ ನಿಲ್ಲಿಸಿದ ಜಾಗದಿಂದ ಆರೋಪಿತರ ಕಛೇರಿಗೆ ನಾನು ಮತ್ತು ನೀತುರವರು ನಡೆದುಕೊಂಡು ಹೋದೆವು. 13ನೇ ತಾರೀಖಿನಲ್ಲಿ ನನ್ನ ಹೇಳಿಕೆಯನ್ನು ಪ್ರಕ್ರಿಯೆ ಸಮಯದಲ್ಲಿ ಕಛೇರಿಯಲ್ಲಿ ಮಾಡಿಕೊಂಡರು. ದೂರುದಾರರ

ಜೊತೆಯಲ್ಲೇ ನಾನೂ ಹೋದೆನು. ಆ ಕಛೇರಿ ಇರುವ ಕಟ್ಟಡ ನೆಲಮಾಳಿಗೆ ಬಿಟ್ಟರೆಬೇರೆ ಅಂತಸ್ತು ಇರಲಿಲ್ಲ. ನಾವು ಆ ಕಛೇರಿಗೆ ಹೋದಾಗ ತುಂಬಾ ಸಾರ್ವಜನಿಕರು ಇದ್ದರು ಎನ್ನುವುದು ನಿಜ. ಎಸಿಬಿ ಅಧಿಕಾರಿಗಳು ಸಾರ್ವಜನಿಕರನ್ನು ಸಾಕ್ಷಿದಾರರನ್ನಾಗಿ ಕರೆಸಿಲ್ಲ.

6.ನನ್ನ ಸಮಕ್ಷಮದಲ್ಲಿ ಆರೋಪಿ ಹಣಕ್ಕೆ ಬೇಡಿಕೆ ಇಟ್ಟರಾ ಎಂದರೆ ಸಾಕ್ಷಿಯು ಮೊದಲು ಕೇಳಿಲ್ಲ, ಸಾಕ್ಷಿಯು ದೂರುದಾರರೇ ನನ್ನ ಕೆಲಸ ಆಗಿದೆಯಾ ನೀವು ಕೇಳಿದಷ್ಟು ಕೊಡುತ್ತೇವೆ ಎಂದು ಹೇಳಿದರು ಎನ್ನುತ್ತಾರೆ. ನನ್ನ ಸಮಕ್ಷಮ 1ನೇ ಆರೋಪಿ ಹಣವನ್ನು ಸ್ವೀಕರಿಸಲಿಲ್ಲ. ನನ್ನ ಮೇಲಧಿಕಾರಿಗಳಿಗೆ ಎಸಿಬಿ ಕಛೇರಿಯಿಂದ ಏನು ಮಾಹಿತಿ ಬಂದಿತೆಂದು ನನಗೆ ಗೊತ್ತಿತ್ತು.

7.ನಳಂದಕುಮಾರ್ ಎಂಬುವವರು ಅರ್ಜಿಯನ್ನು ಪಿಡಿಓರವರಿಗೆ ಕೊಟ್ಟಿದ್ದರು. ಸಾಕ್ಷಿಯು ದೂರಿನೊಂದಿಗೆ ದೂರುದಾರರು ಆ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿದ್ದರು, ಆದ್ದರಿಂದ ನನಗೆ ಗೊತ್ತಾಯಿತು ಎನ್ನುತ್ತಾರೆ. ಆ ಅರ್ಜಿಯ ಪ್ರತಿಯನ್ನು ನಾನು ಓದಿರುತ್ತೇನೆ. ಪಿಡಿಓ ರವರಿಗೆ 9-3-17ರಂದು ಆ ಅರ್ಜಿಯನ್ನು ಕೊಟ್ಟಿದ್ದರು. ಅದರಲ್ಲಿ ಪಿಡಿಓರವರ ಸಹಿ ಸೀಲು ಇತ್ತಾ ಎಂದು ನಾನು ಗಮನಿಸಲಿಲ್ಲ. ಚೆಕ್ಕುಬಂದಿ ಬದಲಾವಣೆಗೆ ಕೊಟ್ಟ ಅರ್ಜಿಯಲ್ಲಿ ಪಿಡಿಓರವರ ಸೀಲು ಸಹಿ ಇತ್ತಾ ಎಂದು ನಾನು ಗಮನಿಸಲಿಲ್ಲ.

8.13-3-17ರಂದು ನನ್ನನ್ನು ಎಸಿಬಿ ಕಛೇರಿಗೆ ಕರೆಸಿದ್ದರು, ಅಲ್ಲಿ ದೂರುದಾರರು ಇದ್ದರು, ಲಂಚಕೊಡಲು ತಂದಿದ್ದ ಹಣವನ್ನು ಹಾಜರುಪಡಿಸಿ ಎಂದು ಹೇಳಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ಕಛೇರಿಯಲ್ಲಿ ದಾಳಿ ಪ್ರಕ್ರಿಯೆ ನಡೆಸಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ಮಹಜರ್ ಕೂಡ ನಡೆಸಿದರು ಎನ್ನುವುದು ಸುಳ್ಳು ಎಂದರೆ

ಸರಿಯಲ್ಲ. ಹಾಗೆಯೇ ದಾಖಲೆಗಳನ್ನು ವಶಪಡಿಸಿಕೊಂಡರೆನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ನಡೆಸಿದ ಮಹಜರಿಗೆ ನಾನು ಅಲ್ಲೇ ಸಹಿ ಹಾಕಿದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

9.ಆರೋಪಿತರ ಕಛೇರಿಯಿಂದ ಎಸಿಬಿ ಕಛೇರಿಗೆ ವಾಪಸ್ ಬಂದಾಗ 9 – 9ವರೆ ಗಂಟೆ ಆಗಿತ್ತು. ಅಲ್ಲಿ ಯಾವುದೇ ದಾಖಲೆಗಳಿಗೆ ಸಹಿ ಹಾಕಲಿಲ್ಲ. ಮಾರನೇದಿನ ಬೆಳಿಗ್ಗೆ 10 ಗಂಟೆಗೆ ಹೋದೆವು. ಆ ದಿವಸ ಎಷ್ಟು ಸಹಿ ಹಾಕಿಸಿಕೊಂಡರು ಎಂದರೆ ಲೆಕ್ಕ ಹಾಕಲಿಲ್ಲ. ನಮ್ಮ ಮುಂದೆ ನಡೆದ ಪ್ರಕ್ರಿಯೆಗೆ ಸಹಿ ಹಾಕಿರುತ್ತೇವೆ. ಗ್ರಾಮ ಪಂಚಾಯಿತಿಯಲ್ಲಿ ನಡೆದ ಪ್ರಕ್ರಿಯೆಯನ್ನು ತೋರಿಸಿ ಸಹಿ ಹಾಕಿಸಿಕೊಂಡರು. ಈ ಪ್ರಕರಣದಲ್ಲಿ ನನಗೆಯಾವುದೇ ವಿಚಾರ ಗೊತ್ತಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ** 2ನೇ **ಆರೋಪಿ ಪರ** ಶ್ರೀ ಡಿ ಹೆಚ್ ಎಲ್ **ವಕೀಲರಿಂದಃ**

ಖಾತೆ ಮಾಡಲು ನೀತುರವರ ತಮ್ಮನ ಹೆಸರಿನಲ್ಲಿ ಅರ್ಜಿ ಕೊಟ್ಟಿದ್ದರು. ನೀತುರವರ ತಮ್ಮ ತನ್ನ ಹೆಸರಿಗೆ ಖಾತೆ ಮಾಡಬೇಕೆಂದು ಅರ್ಜಿ ಕೊಟ್ಟಿರಲಿಲ್ಲ. ನಾವು 10-55ಕ್ಕೆ ಎಸಿಬಿ ಕಛೇರಿಗೆ ಹೋದ ನಂತರ ಅಲ್ಲಿ ಒಬ್ಬರಿಗೊಬ್ಬರ ಪರಿಚಯ ಮಾಡಿಸಿ ನಂತರ ಪ್ರಕ್ರಿಯೆ ಪ್ರಾರಂಭಗೊಳ್ಳುವವರೆಗೆ ಒಂದು ತಾಸು ಹಿಡಿಯಿತು. ಪ್ರಕ್ರಿಯೆ ಮಾಡಿಕೊಂಡು ನಂತರ ಮಹಜರು ಬರೆದರು. ಧ್ರಾವಣ ತಯಾರಿಸಿದ ಪಾತ್ರೆಗಳನ್ನು ಧ್ರಾವಣ ತಯಾರಿಸುವುದಕ್ಕಿಂತ ಮೊದಲು ನಮ್ಮ ಮುಂದೆಯೇ ಶುದ್ಧೀಕರಿಸಿಕೊಂಡಿರುತ್ತಾರೆ. ಡಿವೈಎಸ್‌ಪಿ ರವರ ಕಛೇರಿ ಮತ್ತು ಆ ಬಟ್ಟಲುಗಳನ್ನು ಶುಚಿಗೊಳಿಸಿದ ಸ್ಥಳ ಅಕ್ಕಪಕ್ಕದಲ್ಲೇ ಇರುತ್ತದೆ. ಡಿವೈಎಸ್‌ಪಿ ರವರ ಚೇಂಬರ್ ಗೆ ನಾಲ್ಕೂ ಸುತ್ತಲೂ ಕವರ್ ಆಗಿತ್ತು. ಡಿವೈಎಸ್ಪಿ ಚೇಂಬರ್ ಗೆ ಹೋದ ನಂತರ ಎಲ್ಲ ಮುಗಿದ ನಂತರವೇ ನಾವು ಹೊರಬಂದದ್ದು ಎಂದರೆ ನಿಜ. ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ಆ ಬಟ್ಟಲನ್ನು ಮತ್ತೆ ತೊಳೆದದ್ದನ್ನು ನಾನು ನೋಡಲಿಲ್ಲ ಎಂದರೆ ಸಾಕ್ಷಿಯು

ಅವರು ಅದನ್ನು ಕ್ಲೀನ್ ಮಾಡುತ್ತಿದ್ದುದು ನಮಗೆ ಕಾಣುತ್ತಿತ್ತು ಎನ್ನುತ್ತಾರೆ.

2.ಡಿವೈಎಸ್ ಪಿ ರವರು ನಮ್ಮ ಜೊತೆ ಆರೋಪಿ ಕಛೇರಿಗೆ ಬಂದಿರಲಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ, ನೀತುರವರ ಆರೋಪಿತರ ಕಛೇರಿಯಿಂದ ಹೊರಬಂದು ಸಂಜ್ಞೆ ಮಾಡಿದರು, ನಾನು ಅಲ್ಲೇ ಇದ್ದೆನೆಂದು ಹೇಳಿರುತ್ತೇನೆ, ಈ ವಿಚಾರವನ್ನು ಇದೇ ಮೊದಲ ಬಾರಿಗೆ ಹೇಳುತ್ತಿರುವುದು ಎಂದರೆ ಸಾಕ್ಷಿಯು ನಾವಿಬ್ಬರು ಜೊತೆಯಲ್ಲಿಯೇ ಹೊರಬಂದೆವು ಎನ್ನುತ್ತಾರೆ.

3.ಹೊಸೂರು ಗ್ರಾ.ಪಂ.ಯಲ್ಲಿ ಎಷ್ಟು ಜನ ಸಿಬ್ಬಂದಿಗಳು ಇದ್ದರೆಂದು ನನಗೆ ಗೊತ್ತಿಲ್ಲ. ಡಿವೈಎಸ್ ಪಿ ರವರು ಅಲ್ಲಿ ಎಷ್ಟು ಜನ ಸಿಬ್ಬಂದಿಗಳು ಇದ್ದರೆಂದು ಎಣಿಸಿಲಿಲ್ಲ.

4.ಸೌಮ್ಯಾರವರು ನೀತುರವರಿಗೆ ದುಡ್ಡು ಕೊಡಿ ಎಂದು ಕೇಳಲಿಲ್ಲ ಎಂದರೆ ಸರಿ. ನೀತುರವರು ಕೊಟ್ಟ ಹಣ ಕವರಿನಲ್ಲಿ ಇತ್ತು. ಮನುರವರಿಂದ ಎಸಿಬಿ ಪೊಲೀಸರು ಹಣವನ್ನು ತೆಗೆದುಕೊಂಡರೆಂದು ಹೇಳುವಾಗ ಸಹ ಅದು ಅದೇ ಕವರಿನಲ್ಲಿ ಇತ್ತು. ಫಿನಾಫ್ತಲೀನ್ ಪುಡಿಯನ್ನು ಕವರಿಗೆ ಹಚ್ಚಿರಲಿಲ್ಲ. ಆರೋಪಿತರಲ್ಲಿ ಮನು ಅಥವಾ ಸೌಮ್ಯಾರವರು ಆ ಕವರಿನಿಂದ ಹಣ ತೆಗೆದು ಎಣಿಸಿದರೆಂದು ನಾನು ಹೇಳಿಲ್ಲ. ಅದನ್ನು ಆ ರೀತಿ ಮಹಜರಿನಲ್ಲಿ ಬರೆದದ್ದೂ ಇಲ್ಲ ಎಂದರೆ ಸರಿ.

5.ಖಾತೆ ಬದಲಾವಣೆಗೆ ಅರ್ಜಿಯನ್ನು ಸ್ವತ್ತಿನ ಮಾಲೀಕರೇ ಕೊಡಬೇಕೆನ್ನುವುದು ನಿಜ. ಚೆಕ್ಕುಬಂದಿ ಬದಲಾವಣೆ ಉಪನೋಂದಣಾಧಿಕಾರಿ ಕಛೇರಿಯಲ್ಲಿ ಆಗಬೇಕು ಎಂದರೆ ನಿಜ.

6.ಮಹಜರಿನಲ್ಲಿ ಏನು ಬರೆದಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಈಗ ನನಗೆ ನೋಟುಗಳ ನಂಬರ್ ಹೇಳಲಾಗುವುದಿಲ್ಲ ಎನ್ನುವುದು ನಿಜ. ಮೆಮೊರಿ ಕಾರ್ಡನ್ನು ನನ್ನ ಮುಂದೆ ಸಿಡಿಗೆ ವರ್ಗಾವಣೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ಸಂಭಾಷಣೆ ಯಾವ ಕಂಪೆನಿಯ ಮೊಬೈಲ್ ನಲ್ಲಿ ಇತ್ತು ಎನ್ನುವುದನ್ನು ನನಗೆ ಹೇಳಲಾಗುವುದಿಲ್ಲ. ಯಾವುದರಲ್ಲಿ ವಾಯ್ಸ್ ರೆಕಾರ್ಡ್ ಮಾಡಿಕೊಂಡಿದ್ದು ಎಂದು ನಾನು ಹೇಳಲಿಲ್ಲ ಎಂದರೆ ಸಾಕ್ಷಿ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದಾರೆಂದು ಹೇಳಿದ್ದೇನೆ ಎನ್ನುತ್ತಾರೆ. ಪೊಲೀಸರ ಹೇಳಿಕೆಯಲ್ಲಿ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದಾರೆ ಎಂದು ಹೇಳಿಲ್ಲ. ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು ಎಂದುಜ ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ವಾಯ್ಸು ರೆಕಾರ್ಡರನ್ನು ಯಾವ ಸಿಸ್ಟಂ ನಿಂದ ಸಿಡಿಗೆ ವರ್ಗಾಯಿಸಿದರೆಂದು ನನಗೆ ಹೇಳಲಾಗುವುದಿಲ್ಲ. ಆ ಮೊಬೈಲ್ ಸಂಭಾಷಣೆಯನ್ನು ಸಿಸ್ಟಂ ಗೆ ಎ ಡ್ರಾಪ್ ಅಥವಾ ಕೇಬಲ್ ಮೂಲಕ ಹಾಕಿಸಿದ್ದಾರಾ ಎಂದರೆ ನನಗೆ ಹೇಳಲಾಗುವುದಿಲ್ಲ. ಮೆಮೊರಿ ಕಾರ್ಡನ್ನು ಮತ್ತು ಸಿಡಿಯನ್ನು ವಶಪಡಿಸಿಕೊಳ್ಳುವಾಗ ನಾನು ಇದ್ದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಪೊಲೀಸರು ಹೇಳಿದಂತೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಹೊಸೂರು ಗ್ರಾ.ಪಂ.ಯಲ್ಲಿ ದಾಳಿ ಆಯಿತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅದನ್ನು ಎಸಿಬಿ ಕಛೇರಿಯಲ್ಲಿ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ ಹಾಗೆಯೇ ಫೋಟೋಗಳನ್ನು ಸೃಷ್ಟಿಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಘಟನೆ ನಡೆದಿಲ್ಲ, ಎಸಿಬಿ ರವರು ಹೇಳಿದಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-9ರ ಸ್ಕೆಚ್ ಗೂ ಸಹ ನಾನು ಎಸಿಬಿ ಕಛೇರಿಯಲ್ಲಿ ಸಹಿ ಹಾಕಿದ್ದು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**